# ರಿಯಲ್ ಲೈಫ್ ಕನಸು ರೀಲ್‌ನೊಳಗ ನನಸು!

ಈ ವಾರ ನಮ್ಮೊಂದಿಗೆ

## ಸಂತೋಷ ಝೂವರೆ

### 'ಬಂಗಾರ'ದಂತ ಡಿಸಿ

★ *ಹಿಂದಿ ಧಾರಾವಾಹಿ ಬಿಟ್ಟು ಕನ್ನಡಕ್ಕ ಬಂದಿರಿ...*
ಹೌದು ಹಿಂದಿಯಿಂದ ನನ್ನ ಕರಿಯರ್ ಸುರು ಆತು. ಮೂರು ಹಿಂದಿ ಧಾರಾವಾಹಿಯಲ್ಲಿ ಅಭಿನಯಿಸಿದೆ. ಆದ್ರ ಆಗಿನ್ನೂ ನಾನು ಐಎಎಸ್, ಐಪಿಎಸ್ ಪರೀಕ್ಷೆ ತಯಾರಿಯೊಳಗ ಇದ್ದುದರಿಂದ ಹಾಬಿ ಅಂತ ಮಾಡಿದೆ. ವೃತ್ತಿ ಅಂತ ತಗೊಂಡಿರಲಿಲ್ಲ.

★ *ನಿಮಗ ಹಿಂದಿ ಧಾರಾವಾಹಿ ಸಂಪರ್ಕ ಹ್ಯಂಗ ಬಂತು?*
ನಮ್ಮೂರು ಬೆಳಗಾವಿ. ಮುಂಬೈ ಸಂಪರ್ಕ ನಮಗ ಹೆಚ್ಚು. ಆಗ ನಾನು ಮಾಡೆಲಿಂಗ್‌ಗೆ ಮುಂಬೈಗೆ ಹೋಗತಿದ್ದೆ. ಪರಿಚಯದವರೊಬ್ಬರು ನನಗ ಹಿಂದಿ ಧಾರಾವಾಹಿಯೊಳಗ ಅವಕಾಶ ಮಾಡಿಕೊಟ್ಟರು.

★ *ಮುಂಬೈ ಕಿರುತೆರೆ ಜಗತ್ತು ಹ್ಯಂಗನಿಸಿತ್ತು? ಸಂಭಾವನೆ ಎಷ್ಟಿತ್ತು?*
ಚಲೋ ಇತ್ತು. ಆಗಲೇ ನಾನು ದಿನಕ್ಕ ಆರು ಸಾವಿರ ರೂ. ಸಂಭಾವನೆ ತಗೊಂಡಿದ್ದೆ. ಕನ್ನಡದೊಳಗ ಒಂದು ಸಿನಿಮಾದ ಹೀರೋ ಆಗೂದು, ಹಿಂದಿಯೊಳಗ ಒಂದು ಧಾರಾವಾಹಿ ನಾಯಕ ಆಗಿ ಮಾಡೂದು ಸಮ. ಒಂದು ಧಾರಾವಾಹಿ ಕನಿಷ್ಠ ಅಂದ್ರೂ ಐದು ವರ್ಷ ನಡೀತೈತಿ. ಅಷ್ಟಕ್ಕ ನಿಮ್ಮ ಲೈಫ್ ಸೆಟ್ಲ್ ಆಗಿಬಿಡತೈತಿ. ಇಲ್ಲಿಯಂಗ ಅಲ್ಲಿ ಶೂಟಿಂಗ್ ಮುಂಜಾನಿ 8ರಿಂದ ರಾತ್ರಿ 9-10ರ ವರೆಗೆ ಇರೂದಲ್ಲ. ಪಾಳಿ(ಶಿಫ್ಟ್) ಮೇಲೆ ಶೂಟಿಂಗ್ ನಡಿತಿರತೈತಿ. ಒಂದ ದಿವಸ ಎರಡು ಮೂರು ಪಾಳಿಯೊಳಗೂ ನಟಿಸಬಹುದು.

★ *ಹಿಂದಿ ಭಾಷೆ ಬರತಿತ್ತ?*
ಮನಿಯೊಳಗ ಮರಾಠಿ, ಉತ್ತರ ಕರ್ನಾಟಕದ ಕನ್ನಡ ಆಡುಭಾಷೆ ಮಾತಾಡ್ತೀವಿ. ಅಪ್ಪ ಭೂಪಾಲ್ ಝೂವರೆ ಕೊಲ್ಹಾಪುರ ಮೂಲದವರು. ಸೈನ್ಯಕ್ಕೆ ಸೇರಿ ಉತ್ತರ ಭಾರತದಲ್ಲಿ ಇದ್ದರು. ಸೇನೆಯ ನಿವೃತ್ತಿ ನಂತರ ಬೆಳಗಾವಿಯೊಳಗ ಜೈಲರ್ ಆಗಿ ಕೆಲಸಕ್ಕ ಸೇರಿ, ಇಲ್ಲೇ ನೆಲಸಿದರು. ನಾನು ಬೆಳಗಾವಿಯೊಳಗ ಬೆಳೆದೆ. ಕೆಎಲ್‌ಇ ಸಂಸ್ಥೆ ಕಾಲೇಜನೊಳಗ ಬಿಎ, ಎಲ್‌ಎಲ್‌ಬಿ ಓದಿದೆ. ಹಂಗಾಗಿ ಹಿಂದಿ, ಕನ್ನಡ, ಮರಾಠಿ, ಇಂಗ್ಲಿಷ್ ಎಲ್ಲಾ ಮಾತಾಡತೇವಿ.

★ *ಬೆಳಗಾವಿ ಮಂದಿ ಮುಂಬೈಯೊಳಗ ಬಾಳ ಇರಬೇಕಲ್ಲ?*
ಬೆಳಗಾವಿಗಿಂತ ಹುಬ್ಬಳ್ಳಿ ಧಾರವಾಡದವರು ಬಾಳ ಅದಾರ. ಯಾಕಂದ್ರ ಈ ಎರಡೂ ನಗರದೊಳಗ ನಾಟಕ ಆಡೂದು ಜಾಸ್ತಿ. ನಾಟಕದೊಳಗ ಟ್ರೇನಿಂಗ್ ಪಡದು ಮುಂಬೈಗೆ ಹೋಗತಾರ.

★ *ಅಲ್ಲೇ ಸೆಟ್ಲ್ ಆಗಬಹುದಿತ್ತಲ್ಲ?*
ಅಲ್ಲಿ ಭಯೋತ್ಪಾದಕರ ದಾಳಿ ಜಾಸ್ತಿ, ಬೇಡ ಅಂದ್ರು ಅಪ್ಪ ಅವ್ವ. ಉತ್ತರ ಕರ್ನಾಟಕದೊಳಗ ಶೂಟಿಂಗ್ ನಡೆದ 'ಮೂಡಲ ಮನೆ'ಯೊಳಗ ವೈಶಾಲಿ ಕಾಸರವಳ್ಳಿಯವರು ಶ್ರೀಹರಿ ಅಂತ ಒಳ್ಳೆ ಪಾತ್ರದ ಅವಕಾಶ ಕೊಟ್ರು. ಮುಂದ ಎಲ್ಲ ಧಾರಾವಾಹಿಯೊಳಗೂ ದೊಡ್ಡ ಪಾತ್ರ ಸಿಕ್ಕವು.

★ *'ಬಂಗಾರ' ಟಿಆರ್‌ಪಿ ನಂ.1 ಐತಂತೆ. ಆ ಧಾರಾವಾಹಿ ಹೀರೋ ಡಿಸಿ ಚಂದ್ರಮೋಹನ್ ಪಾತ್ರ ನಿಮಗ ಖುಷಿ ಆಗಿರಬೇಕಲ್ಲ..*
ಎಲ್ಲಿ ಹೋದ್ರು ಡಿಸಿ ಸಾಹೇಬ್ರು ಅಂತಾನ ಕರೀತಾರ. ರಿಯಲ್ ಲೈಫ್‌ನಾಗ ಡಿಸಿ ಅಥವಾ ಎಸ್‌ಪಿ ಆಗಬೇಕಂತ ಆಸೆ ಇತ್ತು. ಆಗಲಿಲ್ಲ. ಈಗ ರೀಲ್ ಲೈಫ್‌ನಾಗ ಆಗೀನಿ. ಖುಷಿ ಆಗೇತಿ. ಸಿನಿಮಾದ ಹೀರೋ ಆಗಿದ್ದರೂ ಇಷ್ಟು ಜನಪ್ರಿಯತೆ ಬರ್ತಿದ್ದಿಲ್ಲ.

★ *ಟಿವಿಯವರನ್ನ ಸಿನಿಮಾ ಹೀರೋ ಆಗಿ ತಗೊಳ್ಳಾಕ ಒಲ್ಲೆ ಅಂತಾರಲ್ಲ. ದಿನಾ ನೋಡಿದ ಮುಖಗಳು ಬ್ಯಾಡ ಅಂತಾರಲ್ಲ.*
ಅದು ಇಂಡಸ್ಟ್ರಿಯವರು ಹಬ್ಬಿಸುವ ವದಂತಿ. 'ಬಂಗಾರ'ದೊಳಗ ನನ್ನ ಪಾತ್ರ ನೋಡಿದ ಜನ ನೀವು ಸಿನಿಮಾದಾಗೂ ಹೀರೋ ಪಾತ್ರ ಮಾಡ್ರಿ, ಇನ್ನೂ ಯಾಕ ಮಾಡಿಲ್ಲ ಅಂತಾರ. ಗಣೇಶ್ ಟಿವಿ ಕಾಮಿಡಿ ಟೈಮ್ಸ್‌ನೊಳಗ ಪ್ರಸಿದ್ಧಿ ಆದಮ್ಯಾಗ ಸಿನಿಮಾದೊಳಗ ದೊಡ್ಡ ಹೀರೋ ಆದರು. ಇಲ್ಲಿಯವರು ಅಲ್ಲಿ ಮಾಡಿದ್ರ ಜನರಿಂದ ಒಳ್ಳೆ ಸ್ವಾಗತ ಸಿಗತೈತಿ. ಹಂಗಂತ ಟಿವಿಯೊಳಗ ನಮಗ ಜನಪ್ರಿಯತೆ ಕಡಿಮಿ ಇಲ್ಲ. ಸಿನಿಮಾದವರಿಗಿಂತ ಜಾಸ್ತಿ ಐತಿ.

■ ನಾಗು

